ದಿನಾಂಕ:13.03.2017ರ ಸೋಮವಾರದಂದು ಅಪರಾಹ್ನ 3.30ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀ ಎ.ಸಿ.ದೇವಯ್ಯರವರ ಅಧ್ಯಕ್ಷತೆಯಲ್ಲಿ ಪ್ರಾಧಿಕಾರದ ಕಚೇರಿ ಸಭಾಂಗಣದಲ್ಲಿ ನಡೆಯುವ 2017–18ನೇ ಸಾಲಿನ ಅಂದಾಜು ಆಯವ್ಯಯ (ಬಡ್ಜೆಟ್) ಮಂಡನಾ ಸಭೆಯ ನಡಾವಳಿ.

| ಕ್ರ.ಸ | ಹಾಜರಿದ್ದ ಸದಸ್ಯರು | ಕ್ರ.ಸ | ಗೈರು ಹಾಜರಿದ್ದ ಸದಸ್ಯರು |
|---|---|---|---|
| 1. | ಮಾನ್ಯ ಶ್ರೀ ಎ.ಸಿ. ದೇವಯ್ಯರವರು, ಅಧ್ಯಕ್ಷರು<br>ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | 1. | ಮಾನ್ಯ ಜಿಲ್ಲಾಧಿಕಾರಿಗಳು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. |
| 2. | ಮಾನ್ಯ ಶ್ರೀ ಕೆ.ಜಿ.ಬೋಪಯ್ಯರವರು, ಸದಸ್ಯರು<br>ವಿಧಾನಸಭಾ ಸದಸ್ಯರು, ವಿರಾಜಪೇಟೆ ಕ್ಷೇತ್ರ. | 2. | ಮಾನ್ಯ ಆರಕ್ಷಕ ಅಧೀಕ್ಷಕರು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. |
| 3. | ಮಾನ್ಯ ಶ್ರೀ ಅಪ್ಪಚ್ಚುರಂಜನ್‌ರವರು, ಸದಸ್ಯರು<br>ವಿಧಾನ ಸಭಾ ಸದಸ್ಯರು, ಮಡಿಕೇರಿ ಕ್ಷೇತ್ರ. | 3. | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಚೆಸ್ಕಾಂ, ಮಡಿಕೇರಿ. |
| 4. | ಮಾನ್ಯ ಶ್ರೀ ಸುನಿಲ್ ಸುಬ್ರಮಣಿರವರು, ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. | 4. | ಕಾರ್ಯಪಾಲಕ ಅಭಿಯಂತರರು, ಸದಸ್ಯರು<br>ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮೈಸೂರು |
| 5 | ಮಾನ್ಯ ಶ್ರೀಮತಿ ವೀಣಾ ಅಚ್ಚಯ್ಯರವರು ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. | 5 | ಕಾರ್ಯಪಾಲಕ ಅಭಿಯಂತರರು ಆಹ್ವಾನಿತರು<br>ಕರ್ನಾಟಕ ಗೃಹ ಮಂಡಳಿ, ಮೈಸೂರು. |
| 6 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸದಸ್ಯರು<br>ಕಲ್ಯಾಣಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ. | 6 | ಜಂಟಿ ನಿರ್ದೇಶಕರು, ಆಹ್ವಾನಿತರು<br>ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಡಗು ಜಿಲ್ಲೆ, ಮಡಿಕೇರಿ. |
| 7 | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಲೋಕೋಪಯೋಗಿ ಇಲಾಖೆ, ಮಡಿಕೇರಿ. | 7 | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಆಹ್ವಾನಿತರು<br>ಮಡಿಕೇರಿ ಉಪ ವಿಭಾಗ, ಮಡಿಕೇರಿ. |
| 8 | ಪೌರಾಯುಕ್ತರು, ಸದಸ್ಯರು<br>ನಗರಸಭೆ, ಮಡಿಕೇರಿ. | | |
| 9 | ಸಹಾಯಕ ನಿರ್ದೇಶಕರು, ನ.ಯೋ.ಸದಸ್ಯರು<br>ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಮಡಿಕೇರಿ | | |
| 10 | ವಿಭಾಗೀಯ ನಿಯಂತ್ರಕರು, ಆಹ್ವಾನಿತರು<br>ಕೆ.ಎಸ್.ಆರ್.ಟಿ.ಸಿ. ಮೈಸೂರು ವಿಭಾಗ, ಪುತ್ತೂರು | | |
| 11 | ಶ್ರೀ ರಾಜಶೇಖರ್ ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ,<br>ಮಡಿಕೇರಿ. | | |

ಪ್ರಾಧಿಕಾರದ ಆಯುಕ್ತರು ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀ ಎ.ಸಿ.ದೇವಯ್ಯರವರು, ವಿಧಾನ ಸಭಾ ಸದಸ್ಯರುಗಳಾದ ಮಾನ್ಯ ಶ್ರೀ ಕೆ.ಜಿ.ಬೋಪಯ್ಯನವರು ಮತ್ತು ಮಾನ್ಯ ಶ್ರೀ ಅಪ್ಪಚ್ಚುರಂಜನ್‌ರವರು, ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಸುನಿಲ್ ಸುಬ್ರಮಣಿರವರು ಮತ್ತು ಮಾನ್ಯ ಶ್ರೀಮತಿ ವೀಣಾ ಅಚ್ಚಯ್ಯರವರುಗಳನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಎಲ್ಲಾ ಸದಸ್ಯರುಗಳು, ಆಹ್ವಾನಿತರುಗಳನ್ನು ಸ್ವಾಗತಿಸುತ್ತಾ ಸಭಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

**<u>1) ವಿಷಯ ಸಂಖ್ಯೆ : 1</u>**

ಹಿಂದಿನ ಸಭೆಯ ಅಂದರೆ ದಿನಾಂಕ:24.06.2016ರಂದು ನಡೆದ ಪ್ರಾಧಿಕಾರದ ಸಭೆಯ ಸಭಾ ನಡಾವಳಿಯನ್ನು ಓದಿ ಅಂಗೀಕರಿಸುವುದು.

**ನಿರ್ಣಯ:–** ದಿನಾಂಕ:24.06.2016ರಂದು ನಡೆದ ಪ್ರಾಧಿಕಾರದ ಸಭಾ ನಡಾವಳಿಯನ್ನು ಓದಲಾಯಿತು. ಸಭೆಯಲ್ಲಿ 1) ಪ್ರಾಧಿಕಾರದಿಂದ ಅನುಮೋದನೆಯಾಗಿರುವ ಖಾಸಗಿ ವಿನ್ಯಾಸಗಳಲ್ಲಿನ ಉದ್ಯಾನವನ ಮತ್ತು ಬಯಲುಪ್ರದೇಶ ಹಾಗೂ ಸಾರ್ವಜನಿಕ ಉಪಯೋಗಕ್ಕೆಂದು (ಪಾರ್ಕ್ ಮತ್ತು ಸಿ.ಎ.ನಿವೇಶನ) ಸಿ.ಎ. ನಿವೇಶನಗಳನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಖಾತೆ ವರ್ಗಾವಣೆ ಮಾಡಿಕೊಳ್ಳುವ ಬಗ್ಗೆ.

ಈ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಪ್ರಾಧಿಕಾರದಿಂದ ಅನುಮೋದನೆಯಾಗಿರುವ ಖಾಸಗಿ ವಿನ್ಯಾಸಗಳಲ್ಲಿ ಉದ್ಯಾನವನ ಮತ್ತು ಬಯಲುಪ್ರದೇಶ ಹಾಗೂ ಸಾರ್ವಜನಿಕ ಉಪಯೋಗಕ್ಕೆಂದು (ಪಾರ್ಕ್ ಮತ್ತು ಸಿ.ಎ.ನಿವೇಶನ) ಕಾಯ್ದಿರಿಸಿರುವ ಜಮೀನನ್ನು ಪ್ರಾಧಿಕಾರ ಮತ್ತು ನಗರಸಭೆಯ ಅಧ್ಯಕ್ಷರು, ಆಯುಕ್ತರು ಮತ್ತು ಇಂಜಿನಿಯರ್‌ರವರುಗಳೊಂದಿಗೆ 10 ದಿವಸಗಳೊಳಗಾಗಿ ಜಂಟಿಯಾಗಿ ಸ್ಥಳ ಪರಿಶೀಲಿಸಿ, ಜಾಗವನ್ನು ಗುರುತಿಸಿ ಬೇಲಿ ಹಾಕಿ ಪ್ರಾಧಿಕಾರದ ಸುಪರ್ದಿಗೆ ಪಡೆದುಕೊಂಡು ಪ್ರಾಧಿಕಾರದ ಆಸ್ತಿಯೆಂದು ಬೋರ್ಡ್ ಅಳವಡಿಸುವಂತೆ ಸಭೆಯಲ್ಲಿ ವಿಧಾನ ಸಭಾ ಸದಸ್ಯರುಗಳು ಹಾಗೂ ವಿಧಾನ ಪರಿಷತ್ ಸದಸ್ಯರುಗಳು ನೀಡಿರುವ ಸಲಹೆಯನ್ನು ಒಪ್ಪಿ ಅದರಂತೆ ಕ್ರಮ ವಹಿಸಲು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

2) ಮಡಿಕೇರಿ ನಗರದ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಕೆ.ನಿಡುಗಣೆ ಗ್ರಾಮದ ಸರ್ವೆ ನಂಬರ್ 1/13ಪಿ3 ರಲ್ಲಿನ ಅಂದಾಜು 61.78 ಎಕರೆ ವಿಸ್ತೀರ್ಣದ ಜಮೀನಿನ ಪೈಕಿ 11.80 ಎಕರೆ ವಿಸ್ತೀರ್ಣದ ಜಮೀನನ್ನು ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ವಸತಿ ಉದ್ದೇಶದ ನಿವೇಶನಗಳನ್ನು ಅಭಿವೃದ್ಧಿ ಪಡಿಸಿ ಸಾರ್ವಜನಿಕರಿಗೆ ಹಂಚುವ ಯೋಜನೆಗೆ ಸಂಬಂಧಿಸಿದಂತೆ ಭೂ ಮಂಜೂರು ಮಾಡಿಕೊಡಲು ಮಾನ್ಯ ಜಿಲ್ಲಾಧಿಕಾರಿಯವರು ಸರ್ಕಾರವನ್ನು ಕೋರಿದ್ದ ಪ್ರಸ್ತಾವನೆಗೆ ಸಂಬಂಧಿಸಿದಂತೆ ಸದರಿ ಯೋಜನೆಯ ಜಮೀನು ಕೂಟುಹೊಳೆ ಸಮೀಪ ಬರುತ್ತಿದ್ದು, ಮಡಿಕೇರಿ ನಗರಕ್ಕೆ ಶುದ್ಧ ಕುಡಿಯುವ ನೀರು ಅಲ್ಲಿಂದಲೇ ಸರಬರಾಜು ಆಗುತ್ತಿರುವುದರಿಂದ ಕುಡಿಯುವ ಶುದ್ಧ ಜಲಮೂಲ ಮಲೀನಗೊಳ್ಳದಂತೆಯೂ ಹಾಗೂ ಈಗಾಗಲೇ ಅರಣ್ಯ ಇಲಾಖೆಯವರು ಬೆಳೆಸಿರುವ ನೆಡುತೋಪುಗಳನ್ನು ಉಳಿಸಿಕೊಳ್ಳುವ ಹಾಗೂ ಪರಿಸರ ಹಾಳಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಹಾಗೂ ಅಲ್ಲಿಯ ಗ್ರಾಮಸ್ಥರ ಮತ್ತು ಕೆ.ನಿಡುಗಣೆ ಗ್ರಾಮ ಪಂಚಾಯಿತಿಯ ವಿರೋಧವಿರುವುದರಿಂದ ಗ್ರಾಮಸ್ಥರ ಹಿತದೃಷ್ಟಿಯಿಂದ ಸದರಿ ಯೋಜನೆಯನ್ನು ಕೈಬಿಡುವುದು ಸೂಕ್ತವೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

3) ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿ ಕಟ್ಟಡವನ್ನು ನಿರ್ಮಿಸಲು ಕೆ.ಬಾಡಗ ಗ್ರಾಮದ ಸರ್ವೆ ನಂಬರ್ 98/25 ರಲ್ಲಿರುವ ಅಂದಾಜು 0.90 ಎಕರೆ ವಿಸ್ತೀರ್ಣದ ಜಮೀನಿಗೆ ಸರ್ಕಾರದಿಂದ ಭೂ ಮಂಜೂರಾತಿ ಆದೇಶವನ್ನು ಪಡೆಯುವ ಬಗ್ಗೆ.

ಸದರಿ ಜಾಗವು ಈಗಾಗಲೇ ಎನ್.ಸಿ.ಸಿ.ಯವರ ಹೆಸರಿನಲ್ಲಿ 1.50ಎಕರೆಗೆ ಖಾತೆ ಆಗಿ ದಿ ಕೂರ್ಗ್ ಇಂಡಿಪೆಂಡೆಂಟ್ ಕಾಯ್ ಎನ್.ಸಿ.ಸಿ ರವರ ಹೆಸರಿನಲ್ಲಿ ಆರ್.ಟಿ.ಸಿ. ಆಗಿದ್ದು, ಇದರಿಂದ 90ಸೆಂಟ್ ಜಾಗವನ್ನು

ವಾಪಾಸ್ಸು ಪಡೆದು ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿಗೆ ಮಂಜೂರು ಮಾಡುವಂತೆ ಮಾನ್ಯ ಜಿಲ್ಲಾಧಿಕಾರಿಯವರು ಸರ್ಕಾರವನ್ನು ಕೋರಿರುತ್ತಾರೆ. ಆದರೆ ಈವರೆವಿಗೂ ಸದರಿ ಪ್ರಸ್ತಾವನೆ ಬಗ್ಗೆ ಸರ್ಕಾರದಿಂದ ಯಾವುದೇ ಮಾಹಿತಿಯು ಬಂದಿರುವುದಿಲ್ಲ. ಆದ್ದರಿಂದ ಖಾಸಗಿ ವಿನ್ಯಾಸದಲ್ಲಿ ಸಿ.ಎ. ನಿವೇಶನಕ್ಕೆಂದು ಕಾಯ್ದಿರಿಸುವ ಜಾಗವನ್ನು ಪ್ರಾಧಿಕಾರದ ವಶಕ್ಕೆ ಪಡೆದು ಅದರಲ್ಲಿ ಪ್ರಾಧಿಕಾರದ ಕಚೇರಿ ಕಟ್ಟಡವನ್ನು ನಿರ್ಮಿಸುವುದು ಸೂಕ್ತವೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

4) ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಿಸಲು ತಾಂತ್ರಿಕ ಅನುಮೋದನೆ ನೀಡುವ ಸಂಧರ್ಭದಲ್ಲಿ ನಕ್ಷೆಯಲ್ಲಿ ಮಳೆ ನೀರಿನ ಕೊಯ್ಲನ್ನು ಅಳವಡಿಸುವುದು ಮತ್ತು ಅಳವಡಿಸಿರುವುದನ್ನು ಖಾತ್ರಿಗೊಳಿಸುವ ಬಗ್ಗೆ.

ಈ ಬಗ್ಗೆ ಸಭೆಯಲ್ಲಿ ವಿವರವಾಗಿ ಚರ್ಚಿಸಿ, ಮಳೆ ನೀರು ಕೊಯ್ಲನ್ನು ಕಡ್ಡಾಯಗೊಳಿಸುವುದರ ಜೊತೆಗೆ ಸೋಲಾರ್ ಅಳವಡಿಸುವುದನ್ನೂ ಸಹ ಕಡ್ಡಾಯಗೊಳಿಸುವುದು. ನಗರಸಭೆಯಿಂದ ಮುಕ್ತಾಯ ಪ್ರಮಾಣ ಪತ್ರ ನೀಡುವ ಪೂರ್ವದಲ್ಲಿ ಮಳೆ ನೀರಿನ ಕೊಯ್ಲು ಮತ್ತು ಸೋಲಾರ್ ಅಳವಡಿಸಿರುವುದನ್ನು ಖಾತ್ರಿಪಡಿಸಿಕೊಂಡು ಮುಕ್ತಾಯ ಪ್ರಮಾಣ ಪತ್ರವನ್ನು ನೀಡಲು ಕ್ರಮ ಕೈಗೊಳ್ಳಬಹುದೆಂದು ಸಭೆಯಲ್ಲಿ ಹಾಜರಿದ್ದ ಪೌರಾಯುಕ್ತರಿಗೆ ಸೂಚನೆ ನೀಡಲಾಯಿತು ಹಾಗೂ ಮಡಿಕೇರಿ ನಗರದಲ್ಲಿ ವಾಹನ ನಿಲುಗಡೆ ವ್ಯವಸ್ಥೆಯು ತುಂಬಾ ಜಟಿಲವಾಗಿರುವುದರಿಂದ ಆರಕ್ಷಕ ಅಧೀಕ್ಷಕರೊಂದಿಗೆ ಚರ್ಚಿಸಿ, ಕಾಲೇಜು ರಸ್ತೆ ಮತ್ತು ಮಹದೇವಪೇಟೆಯ ರಸ್ತೆಗಳಲ್ಲಿ ಎಡ ಮತ್ತು ಬಲ ಬದಿಯಲ್ಲಿ ದಿನ ಬಿಟ್ಟು ದಿನ ಪಾರ್ಕಿಂಗ್ ವ್ಯವಸ್ಥೆಯನ್ನು ಜಾರಿಗೆ ತರಲು ಕೋರುವಂತೆ ಸಭೆಯಲ್ಲಿ ನಗರಸಭಾ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ಸೂಚಿಸಿ ನಿರ್ಣಯ ಕೈಗೊಳ್ಳಲಾಯಿತು.

ಈ ಮೇಲಿನ ಅಂಶಗಳೊಂದಿಗೆ ದಿನಾಂಕ:24.06.2017ರ ಪ್ರಾಧಿಕಾರದ ಸಬೆಯ ನಡಾವಳಿಗೆ ಸಭೆಯು ಸವಾನುಮತದ ಅಂಗೀಕಾರ ನಿಡಿತು.

**<u>2) ವಿಷಯ ಸಂಖ್ಯೆ 2:-</u>**

ಏಪ್ರಿಲ್ 2016ನೇ ತಿಂಗಳಿನಿಂದ ಫೆಬ್ರವರಿ 2017ನೇ ತಿಂಗಳವರೆಗಿನ ಜಮಾ ಖರ್ಚುಗಳನ್ನು ಅಂಗೀಕರಿಸುವ ಬಗ್ಗೆ.

**ಟಿಪ್ಪಣಿ:-** ಜಮಾ ಖರ್ಚುಗಳ ವಿವರ ಈ ಕೆಳಗಿನಂತಿವೆ.

**ಜಮಾ**

| | | | |
|---|---|---|---|
| 1 | ಪರಿಶೀಲನಾ ಶುಲ್ಕ. | ರೂ. | 23,60,997.00 |
| 2 | ಕೆ.ಟಿ.ಸಿ.ಪಿ. ಕಾಯ್ದೆ 1961ರ ಕಲಂ 18ರಡಿ ಪಾವತಿಸಿಕೊಂಡಿರುವ ಶುಲ್ಕ | ರೂ. | 13,97,411.00 |
| 3 | ಕೆ.ಟಿ.ಸಿ.ಪಿ.ಕಾಯ್ದೆ ಕಲಂ 18ರಡಿ ಶುಲ್ಕ ಕಾವೇರಿ ಗ್ರಾಮೀಣ ಬ್ಯಾಂಕ್‌ನಿಂದ ಇಂಡಿಯನ್ ಬ್ಯಾಂಕ್‌ಗೆ ವರ್ಗಾವಣೆ ಆಗಿ ಜಮೆ ಆಗಿರುವುದು | ರೂ. | 4,54,248.00 |
| 4 | ಕೆರೆ ಅಭಿವೃದ್ಧಿ ಶುಲ್ಕ | ರೂ. | 49,20,582.00 |

| | | | |
|---|---|---|---|
| 5 | ಇಂಜಿನಿಯರ್ ಪರವಾನಿಗೆ ಶುಲ್ಕ | ರೂ. | 26,000.00 |
| 6 | ಬ್ಯಾಂಕ್ ಉಳಿತಾಯ ಖಾತೆ ಬಡ್ಡಿ<br>1. ಕಾವೇರಿ ಗ್ರಾಮೀಣ ಬ್ಯಾಂಕು (ಸಿ.ಎ. + ಪಾರ್ಕ್ ವಿನಾಯಿತಿ ಶುಲ್ಕ) | ರೂ. | 60,940.00 |
| | 2. ಇಂಡಿಯನ್ ಬ್ಯಾಂಕು | ರೂ. | 2,43,302.00 |
| | 3. ಇಂಡಿಯನ್ ಬ್ಯಾಂಕು (ಅಕ್ರಮ – ಸಕ್ರಮ) | ರೂ. | 10,254.00 |
| 7 | ಮಾಹಿತಿ ಹಕ್ಕು ಅಧಿನಿಯಮ 2005ರಡಿ ಪಾವತಿಸಿಕೊಂಡಿರುವ ಶುಲ್ಕ | ರೂ. | 893.00 |
| 8 | ಇತರೆ | ರೂ. | 2,366.00 |
| 9 | ಹೆಚ್ಚುವರಿಯಾಗಿ ಪಾವತಿಸಿದ್ದ ಟಿ.ಡಿ.ಎಸ್. ಮರು ಜಮೆ | ರೂ. | 24,029.00 |
| | **ಒಟ್ಟು ಜಮೆ** | **ರೂ.** | **95,01,022.00** |

<u>**ಖರ್ಚು**</u>

| | | | |
|---|---|---|---|
| 1 | ಅಧ್ಯಕ್ಷರ ಗೌರವಧನ ಮತ್ತು ಇತರೆ ಭತ್ಯೆಗಳು | ರೂ. | 1,64,317.00 |
| 2 | ಆಯುಕ್ತರ ಪ್ರಭಾರ ಭತ್ಯೆ | ರೂ. | 23,188.00 |
| 3 | ಹಿಂದಿನ ಆಯುಕ್ತರಾದ ಶ್ರೀ ಎಲ್ ಶಿವಮಲ್ಲುರವರಿಗೆ ಪರಿಷ್ಕೃತ ವೇತನ ವ್ಯತ್ಯಾಸ ಪಾವತಿ.(ನವೆಂಬರ್ 2000 ರಿಂದ 2003ರ ಡಿಸೆಂಬರ್ ವರೆಗೆ) | ರೂ. | 3,15,829.00 |
| 4 | ಸಿಬ್ಬಂದಿ ವೇತನ | ರೂ. | 3,70,619.00 |
| 5 | ಕಂಪ್ಯೂಟರ್ ದುರಸ್ಥಿ + ಇತರೆ ವೆಚ್ಚ (ಸನ್‌ಶೈನ್ ಐಟಿ ಸೆಲ್ಯೂಷನ್+ಎಸ್ಟೇಟ್ ಸಿಸ್ಟಮ್ ಅಂಡ್ ಸಾಫ್ಟ್‌ವೇರ್ಸ್) | ರೂ. | 7,371.00 |
| 6 | ಕಂಪ್ಯೂಟರ್ ವೆಬ್‌ಸೈಟ್ ನವೀಕರಣ ಪ್ರೀಮಿಯರ್ ಟೆಕ್ನಾಲಜಿ, ಬೆಂಗಳೂರಿಗೆ ಪಾವತಿ | ರೂ. | 12,500.00 |
| 7 | ವಿದ್ಯುಚ್ಛಕ್ತಿ ಬಿಲ್ ಪಾವತಿ ವೆಚ್ಚ | ರೂ. | 11,183.00 |
| 8 | ದೂರವಾಣಿ ವೆಚ್ಚ | ರೂ. | 22,713.00 |
| 9 | ಕಚೇರಿ ಸಾದಿಲ್ವಾರು ವೆಚ್ಚ | ರೂ. | 8,370.00 |
| 10 | ಸ್ಟೇಶನರಿ ಖರೀದಿ | ರೂ. | 9,805.00 |
| 11 | ಸಭಾ ಉಪಹಾರ ವೆಚ್ಚ | ರೂ. | 2,690.00 |
| 12 | ಕಚೇರಿಗೆ 3 ಹೊಸ ನಾಮಫಲಕ ಅಳವಡಿಸಿ ಹೆಸರು ಬರೆದಿರುವ ಬಾಬ್ತು ಖರ್ಚು | ರೂ. | 15,500.00 |
| 13 | ಪ್ರಯಾಣಭತ್ಯೆ ಬಿಲ್ ಪಾವತಿ | ರೂ. | 2,600.00 |
| 14 | ಮುದ್ರಣ ವೆಚ್ಚ | ರೂ. | 20,920.00 |
| 15 | ರಾಷ್ಟ್ರೀಯ ಹಬ್ಬಕ್ಕೆ ವಂತಿಕೆ ನೀಡಿರುವುದು. | ರೂ. | 13,000.00 |
| 16 | ಅಂಚೆ ಚೀಟಿ ಖರೀದಿ | ರೂ. | 1,000.00 |
| 17 | ಎಸೆಫ್ ಅಸೋಷಿಯೇಟ್ಸ್ ಅಂಡ್ ಟ್ಯಾಕ್ಸ್ ಕನ್ಸಲ್ಟೆಂಟ್, ಮಡಿಕೇರಿ (ಇನ್‌ಕಮ್ ಟ್ಯಾಕ್ಸ್ ಫೈಲ್ ಮಾಡಿರುವುದು) | ರೂ. | 2,250.00 |

| | | | |
|---|---|---|---|
| 18 | ವಕೀಲರ ಶುಲ್ಕ ಪಾವತಿ | ರೂ. | 10,000.00 |
| 19 | ಕಚೇರಿ ಉಪಯೋಗಕ್ಕೆ ಟೇಬಲ್ ಮತ್ತು ಬೀರು ಖರೀದಿ | ರೂ. | 22,785.00 |
| 20 | ಕಾವೇರಿ ಗ್ರಾಮೀಣ ಬ್ಯಾಂಕ್‌ನಲ್ಲಿ ಜಮೆಯಾಗಿದ್ದ ಕೆ.ಟಿ.ಸಿ.ಪಿ.ಕಾಯ್ದೆ ಕಲಂ 18ರಡಿ ಪಾವತಿಸಿದ್ದ ಶುಲ್ಕವನ್ನು ಇಂಡಿಯನ್ ಬ್ಯಾಂಕ್‌ಗೆ ವರ್ಗಾವಣೆ ಮಾಡಿರುವುದು. | ರೂ. | 4,54,248.00 |
| 21 | ಇತರೆ | ರೂ. | 375.00 |
| | **ಒಟ್ಟು ವೆಚ್ಚ** | ರೂ. | **14,91,263.00** |

**ಘೋಶ್ವಾರೆ:**

| | | | |
|---|---|---|---|
| 1 | 2016ನೇ ಏಪ್ರಿಲ್ ತಿಂಗಳಿನ ಆರಂಭಿಕ ಶಿಲ್ಕು | ರೂ. | 1,14,20,091.00 |
| 2 | 2016ನೇ ಏಪ್ರಿಲ್ ತಿಂಗಳಿನಿಂದ ಫೆಬ್ರವರಿ 2017 ರವರೆಗಿನ ಜಮೆ | ರೂ. | 95,01,022.00 |
| 3 | ಒಟ್ಟು ಜಮೆ | ರೂ. | **2,09,21,113.00** |
| 4 | 2016ನೇ ಏಪ್ರಿಲ್ ತಿಂಗಳಿನಿಂದ ಫೆಬ್ರವರಿ 2017 ರವರೆಗಿನ ಖರ್ಚು | ರೂ. | 14,91,263.00 |
| 5 | 2017 ನೇ ಫೆಬ್ರವರಿ ತಿಂಗಳ ಆಖೈರು ಶಿಲ್ಕು | ರೂ. | **1,94,29,850.00** |
| 6 | ಠೇವಣಿ ಇಟ್ಟಿರುವುದು | ರೂ. | **1,44,73,148.00** |
| | **ಒಟ್ಟು ಮೊಬಲಗು** | ರೂ. | **3,39,02,998.00** |

ಮೇಲಿನ ಜಮೆ ಮತ್ತು ಖರ್ಚುಗಳಿಗೆ ಸಭೆಯ ಅಂಗೀಕಾರಕ್ಕಾಗಿ ಸಲ್ಲಿಸಿದೆ.

ನಿರ್ಣಯ:– ಈ ಮೇಲಿನ ಜಮಾ ರೂ. 95,01,022/– ಮತ್ತು ಖರ್ಚು ರೂ. 14,91,263/– ಗಳಿಗೆ ಸಭೆಯು ಒಪ್ಪಿ ಸವಾನುಮತದ ಅಂಗೀಕಾರ ನೀಡಿತು.

**3) ವಿಷಯ ಸಂಖ್ಯೆ 3:– 2017–18ನೇ ಸಾಲಿನ ಅಂದಾಜು ಆಯವ್ಯಯ ಮಂಡನೆಯನ್ನು (ಬಡ್ಜೆಟ್) ಸಭೆಯಲ್ಲಿ ಅಂಗೀಕರಿಸುವ ಬಗ್ಗೆ.**

**ಟಿಪ್ಪಣಿ:–** ಅಂದಾಜು ಆಯವ್ಯಯದ ವಿವರಗಳನ್ನು ಈ ಕೆಳಗಿನಂತೆ ಸಲ್ಲಿಸಲಾಗಿದೆ.

**ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ**
**2017–18ನೇ ಸಾಲಿನ ಅಂದಾಜು ಜಮೆಯ ವಿವರ ಆಯವ್ಯಯ (ಬಡ್ಜೆಟ್) ವಿವರ**

| ಕ್ರ. ಸಂ | ಜಮೆಯ ವಿವರ | 2014–15ನೇ ಸಾಲಿನ ಜಮೆ | 2015–16ನೇ ಸಾಲಿನ ಜಮೆ | 2016–17ನೇ ಸಾಲಿನ ಜಮೆ | 2017–18ನೇ ಸಾಲಿನ ನಿರೀಕ್ಷಿತ ಅಂದಾಜು ಜಮೆ |
|---|---|---|---|---|---|
| 1 | ಪರಿಶೀಲನಾ ಶುಲ್ಕ | 22,81,775.00 | 7,05,278.00 | 23,73,475.00 | **25,00,000.00** |
| 2 | ಕೆ.ಟಿ.ಸಿ.ಪಿ. ಕಾಯ್ದೆ 1961ರ ಕಲಂ 18 ರಲ್ಲಿ ಸಂಗ್ರಹಿಸಲಾದ ಶುಲ್ಕ | 22,44,892.00 | 2,01,450.00 | 18,53,633.00 | **25,00,000.00** |
| 3 | ಕೆರೆ ಅಭಿವೃದ್ಧಿ ಶುಲ್ಕ | 41,83,500.00 | 14,13,258.00 | 49,33,782.00 | **30,00,000.00** |
| 4 | ಇಂಡಿಯನ್ ಬ್ಯಾಂಕ್ ನಿಂದ ಹೆಚ್.ಡಿ.ಎಫ್.ಸಿ ಬ್ಯಾಂಕ್‌ಗೆ ವರ್ಗಾವಣೆಯಾಗಿ ಮರು ಜಮೆ | 31,12,000.00 | - | - | |

| | | | | | |
|---|---|---|---|---|---|
| 5 | ಎಲ್ಲಾ ಬ್ಯಾಂಕ್‌ಗಳ ಉಳಿತಾಯ ಖಾತೆಯಲ್ಲಿರುವ ಬಡ್ಡಿ | 3,57,986.00 | 4,84,511.00 | 3,32,272.00 | **5,00,000.00** |
| 6 | ಟೆಂಡರ್ ಫಾರಂ ಶುಲ್ಕ+ಟೆಂಡರ್ ಠೇವಣಿ ಶುಲ್ಕ | - | - | - | **5,00,000.00** |
| 7 | ಮಾಹಿತಿ ಹಕ್ಕು ಅಧಿನಿಯಮ 200ರಡಿ ಪಾವತಿಸಿಕೊಂಡಿರುವ ಶುಲ್ಕ | 5,146.00 | 2,680.00 | 893.00 | **5,000.00** |
| 8 | ಟಿ.ಡಿ.ಎಸ್ ಪಾವತಿಸಿರುವುದು | 1,630.00 | - | - | **1,00,000.00** |
| 9 | ಹೆಚ್ಚುವರಿಯಾಗಿ ಪಾವತಿಸಿದ್ದ ಟಿ.ಡಿ.ಎಸ್. ಮರು ಜಮೆ | - | - | 24,029.00 | **-** |
| 10 | ಮಾಹಾಯೋಜನೆಗೆ ಸಂಬಂಧಿಸಿದಂತೆ ಶುಲ್ಕ (ನಕ್ಷೆ+ಸಿ.ಡಿ. ಶುಲ್ಕ) | 15,500.00 | - | - | **-** |
| 11 | ಇಂಜಿನಿಯರವರಿಗೆ ಪರವಾನಿಗೆ ನೀಡುವ ನವೀಕರಿಸುವ ಶುಲ್ಕ | 26,000.00 | 20,000.00 | 26,000.00 | **30,000.00** |
| 12 | ಕೆರೆ ಅಭಿವೃದ್ಧಿ ಶುಲ್ಕ ಹೆಚ್.ಡಿ.ಎಫ್.ಸಿ ಬ್ಯಾಂಕ್‌ನಿಂದ ಕಾವೇರಿ ಗ್ರಾಮೀಣ ಬ್ಯಾಂಕ್‌ಗೆ ವರ್ಗಾವಣೆ | - | 83,42,245.45 | - | - |
| 13 | ಕೆರೆ ಅಭಿವೃದ್ಧಿ ಶುಲ್ಕ ಕಾವೇರಿ ಗ್ರಾಮೀಣ ಬ್ಯಾಂಕ್‌ನಿಂದ ವಿಜಯ ಬ್ಯಾಂಕ್‌ಗೆ ವರ್ಗಾಯಿಸಿ ವಿಜಯ ಬ್ಯಾಂಕಿನಲ್ಲಿ ಠೇವಣಿ ಹೂಡಿರುವುದು | - | 50,00,000.00 | - | - |
| 14 | ಸಿಬ್ಬಂದಿಯವರಿಗೆ ಹೆಚ್ಚುವರಿಯಾಗಿ ಪಾವತಿಸಿದ್ದ ವೇತನವನ್ನು ಮರು ಜಮೆ ಮಾಡಿರುವುದು. | - | 11,596.00 | - | - |
| 15 | ಇತರೆ ಮೂಲಗಳಿಂದ ಬರುವ ಆದಾಯ | 2,426.00 | 3,670.00 | 2,566.00 | **5,000.00** |
| | **ಒಟ್ಟು** | 1,22,30,855.00 | 1,61,84,688.00 | 95,46,650.00 | **91,40,000.00** |

## 2017–18ನೇ ಸಾಲಿನ ಅಂದಾಜು ಖರ್ಚುಗಳ ವಿವರ

| **ಕ್ರ. ಸಂ** | **ಖರ್ಚುಗಳ ವಿವರ** | 2014–15ನೇ ಸಾಲಿನ ಖರ್ಚು | 2015–16ನೇ ಸಾಲಿನ ಖರ್ಚು | 2016–17ನೇ ಸಾಲಿನ ಖರ್ಚು | **2017–18ನೇ ಸಾಲಿನ ನಿರೀಕ್ಷಿತ ಖರ್ಚು** |
|---|---|---|---|---|---|
| 1 | ಅಧ್ಯಕ್ಷರ ಗೌರವಧನ, ಇತರೆ ಭತ್ಯೆ | - | 3,38,890.00 | 1,95,921.00 | **4,00,000.00** |
| 2 | ಆಯುಕ್ತರ ವೇತನ ಮತ್ತು ಇತರ ಭತ್ಯೆಗಳು (ಪ್ರಭಾರ ಭತ್ಯೆ) | 33,137.00 | 25,296.00 | 25,296.00 | **4,00,000.00** |
| 3 | ಪಿಂಚಣಿ ವಂತಿಕೆ (ಹಿಂದಿನ ಆಯುಕ್ತರಾದ ಶ್ರೀ ಎಲ್ ಶಿವಮಲ್ಲುರವರಿಗೆ ಪರಿಷ್ಕೃತ ವೇತನ ವ್ಯತ್ಯಾಸ ಪಾವತಿ.(ನವೆಂಬರ್ 2000 ರಿಂದ 2003ರ ಡಿಸೆಂಬರ್ ವರೆಗೆ) | - | - | 3,15,829.00 | **3,00,000.00** |
| 4 | ಸಿಬ್ಬಂದಿ ವೇತನ | 3,45,150.00 | 3,38,880.00 | 4,04,391.00 | **6,50,000.00** |
| 5 | ದೂರವಾಣಿ ವೆಚ್ಚ | 14,987.00 | 16,422.00 | 24,664.00 | **40,000.00** |

| | | | | | |
|---|---|---|---|---|---|
| 6 | ವಿದ್ಯುಚ್ಛಕ್ತಿ ವೆಚ್ಚ | 6,676.00 | 10,041.00 | 11,813.00 | **20,000.00** |
| 7 | ಪತ್ರಿಕಾ ಪ್ರಕಟಣೆ ವೆಚ್ಚ | 11,151.00 | - | - | **20,000.00** |
| 8 | ದಿನಪತ್ರಿಕೆ ಖರೀದಿ ವೆಚ್ಚ | - | 5,400.00 | 2400.00 | **5,000.00** |
| 9 | ಪ್ರಯಾಣ ಭತ್ಯೆ | 2,930.00 | 2,500.00 | 2,600.00 | **10,000.00** |
| 10 | ಕಾರು ಖರೀದಿ/ಬಾಡಿಗೆ ವೆಚ್ಚ/ಇಂಧನ ವೆಚ್ಚ | 11,000.00 | - | - | **25,000.00** |
| 11 | ಮುದ್ರಣ ವೆಚ್ಚ | 19,500.00 | 20,820.00 | 20,920.00 | **25,000.00** |
| 12 | ವಕೀಲರ ಶುಲ್ಕ ಪಾವತಿ | 5,500.00 | - | 10,000.00 | **50,000.00** |
| 13 | ಸ್ಟೇಶನರಿ ಖರೀದಿ ಮತ್ತು ಕಛೇರಿ ಸಾಧಿಲ್ವಾರು ವೆಚ್ಚ | 25,220.00 | 21,863.00 | 17,775.00 | **50,000.00** |
| 14 | ಲೆಕ್ಕ ಪರಿಶೋಧನಾ ಶುಲ್ಕ ಪಾವತಿ | 32,263.00 | 21,107.00 | 21,593.00 | **30,000.00** |
| 15 | ರಾಷ್ಟ್ರೀಯ ಹಬ್ಬದ ವಂತಿಕೆ ಜಿಲ್ಲಾಧಿಕಾರಿಯವರಿಗೆ ಪಾವತಿ | 12,000.00 | 13,000.00 | 13,000.00 | **15,000.00** |
| 16 | ಸಭಾ ಉಪಾಹಾರ ವೆಚ್ಚ | 3,050.00 | 3,285.00 | 4,040.00 | **20,000.00** |
| 17 | ಅಂಚೆ ಚೀಟಿ ಖರೀದಿ | 3,000.00 | 2,000.00 | 2,000.00 | **5,000.00** |
| 18 | ಕಚೇರಿಗೆ ಹೊಸ ನಾಮಫಲಕ ಅಳವಡಿಸಿ ಹೆಸರು ಬರೆದಿರುವ ಬಾಬ್ತು ಖರ್ಚು | - | - | 15,500.00 | **10,000.00** |
| 19 | ಕಾವೇರಿ ಗ್ರಾಮೀಣ ಬ್ಯಾಂಕ್‌ನಲ್ಲಿ ಜಮೆಯಾಗಿದ್ದ ಕೆ.ಟಿ.ಸಿ.ಪಿ.ಕಾಯ್ದೆ ಕಲಂ 18ರಡಿ ಪಾವತಿಸಿದ್ದ ಶುಲ್ಕವನ್ನು ಇಂಡಿಯನ್ ಬ್ಯಾಂಕ್‌ಗೆ ವರ್ಗಾವಣೆ ಮಾಡಿರುವುದು. | - | - | 4,54,248.00 | **-** |
| 20 | ಎಸೆಫ್ ಅಸೋಷಿಯೇಟ್ಸ್ ಅಂಡ್ ಟ್ಯಾಕ್ಸ್ ಕನ್ಸಲ್ಟೆಂಟ್, ಮಡಿಕೇರಿ (ಇನ್‌ಕಮ್ ಟ್ಯಾಕ್ಸ್ ಫೈಲ್ ಮಾಡಿರುವುದು) | - | - | 2,250.00 | **20,000.00** |
| 21 | ಕೆ.ಟಿಸಿ.ಪಿ ಕಾಯ್ದೆ ಕಲಂ 18ರಲ್ಲಿ ಸಂಗ್ರಹಿಸಲಾದ ಶುಲ್ಕದ ಶೇ.5 ನಗರ ಯೋಜನಾ ಮಂಡಳಿಗೆ ಪಾವತಿ | 1,93,743.00 | 1,22,446.00 | - | **1,00,000.00** |
| 22 | ಕಚೇರಿ ಉಪಯೋಗಕ್ಕೆ ಪಿಠೋಪಕರಣಗಳ ಖರೀದಿ | - | - | 22,785.00 | **50,000.00** |
| 23 | ಕಚೇರಿ ಕಟ್ಟಡ ನಿರ್ಮಿಸಲು ಆಗುವ ವೆಚ್ಚ | - | - | - | **50,00,000.00** |
| 24 | ನಗರ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಕೆರೆ ಅಭಿವೃದ್ಧಿ/ದುರಸ್ಥಿ ವೆಚ್ಚ | - | - | - | **50,00,000.00** |
| 25 | ಮೇಜರ್ ಮಂಗೇರಿರ ಮುತ್ತಣ್ಣ ವೃತ್ತದಿಂದ ರಾಜಸೀಟ್ ಉದ್ಯಾನವನದವರೆಗೆ ವಿದ್ಯುತ್ ಲ್ಯಾಂಪ್‌ಗಳನ್ನು ಅಳವಡಿಸುವ ಬಗ್ಗೆ ವೆಚ್ಚ | - | - | - | **20,00,000.00** |
| 26 | ಸಿ.ಎ/ಉದ್ಯಾನವನ ಬಯಲು ಪ್ರದೇಶವನ್ನು ಅಭಿವೃದ್ಧಿ ಪಡಿಸಲು ಆಗುವ ವೆಚ್ಚ | - | - | - | **20,00,000.00** |
| 27 | ಕಂಪ್ಯೂಟರ್ ಮತ್ತು ಅದಕ್ಕೆ ಸಂಬಂಧಪಟ್ಟ ಸಲಕರಣೆಗಳು, ಜೆರಾಕ್ಸ್ ಮಿಷನ್, ಯು.ಪಿ.ಎಸ್, ಪ್ರಿಂಟರ್ ಮತ್ತು ಫ್ಯಾಕ್ಸ್ ಮಿಷಿನ್ ಖರೀದಿ ವೆಚ್ಚ/ ವೆಬ್ ಸೈಟ್ ನವೀಕರಣ ಮತ್ತು ನಿರ್ವಹಣೆ | 14,866.00 | 35,183.00 | 19,871.00 | **1,00,000.00** |
| 28 | ಟಿ.ಡಿ.ಎಸ್. ಪಾವತಿ (ಗದ್ದಿಗೆ + ಇತರೆ) | 16,429.00 | 41,480.00 | - | - |

| | | | | | |
|---|---|---|---|---|---|
| 29 | ಸೇಲ್ಸ್ ಟ್ಯಾಕ್ಸ್ ಪಾವತಿ (ಗದ್ದಿಗೆ + ಇತರೆ) | 19,605.00 | 82,961.00 | - | - |
| 30 | ಕಾರ್ಮಿಕ ಕಲ್ಯಾಣ ನಿಧಿಗೆ ಪಾವತಿ (ಗದ್ದಿಗೆ + ಇತರೆ) | - | 25,642.00 | - | - |
| 31 | ರಾಯಲ್ಟಿ (ಗದ್ದಿಗೆ + ಇತರೆ) | - | 9,605.00 | - | - |
| 32 | ಗದ್ದಿಗೆಯಲ್ಲಿ ಉದ್ಯಾನವನ ಅಭಿವೃದ್ಧಿ/ನಿರ್ವಹಣೆ, ಹೆಚ್ಚುವರಿ ಕಾಮಗಾರಿ, ವಿದ್ಯುತ್‌ಚ್ಛಕ್ತಿ ಬಿಲ್ ಪಾವತಿ ಮತ್ತು ಇತರೆ ವೆಚ್ಚ | 7,32,532.00 | 17,82,323.00 | - | - |
| 34 | ಕೆರೆ ಅಭಿವೃದ್ಧಿ ಶುಲ್ಕ ಇಂಡಿಯನ್ ಬ್ಯಾಂಕ್‌ನಿಂದ ಹೆಚ್.ಡಿ.ಎಫ್.ಸಿ ಬ್ಯಾಂಕ್‌ಗೆ ವರ್ಗಾವಣೆ ಮಾಡಿರುವುದು | 31,12,000.00 | - | - | - |
| 35 | ಕೆರೆ ಅಭಿವೃದ್ಧಿ ಶುಲ್ಕ ಹೆಚ್.ಡಿ.ಎಫ್.ಸಿ ಬ್ಯಾಂಕ್‌ನಿಂದ ಕಾವೇರಿ ಗ್ರಾಮೀಣ ಬ್ಯಾಂಕ್‌ಗೆ ವರ್ಗಾವಣೆ | - | 83,42,245.45 | - | - |
| 36 | ಕೆರೆ ಅಭಿವೃದ್ಧಿ ಶುಲ್ಕ ಕಾವೇರಿ ಗ್ರಾಮೀಣ ಬ್ಯಾಂಕ್‌ನಿಂದ ವಿಜಯ ಬ್ಯಾಂಕ್‌ಗೆ ವರ್ಗಾಯಿಸಿ ವಿಜಯ ಬ್ಯಾಂಕಿನಲ್ಲಿ ಠೇವಣಿ ಹೂಡಿರುವುದು | - | 50,00,000.00 | - | - |
| 37 | ಇತರೆ ವೆಚ್ಚ | 60.00 | 160.00 | 375.00 | **10,000.00** |
| ಒಟ್ಟು | | 46,14,799.00 | 1,62,61,549.00 | 15,87,271.00 | **1,63,55,000.00** |

**ಘೋಶ್ವಾರೆ:**

| | | | |
|---|---|---|---|
| | 2017–18ನೇ ಸಾಲಿನ ಅಂದಾಜು ಆಯವ್ಯಯದ ಘೋಶ್ವಾರೆ ವಿವರ | | |
| **1.** | **2017–18ನೇ ಸಾಲಿನ ಆರಂಭಿಕ ಶಿಲ್ಕು** | **ರೂ.** | **1,93,79,470.00** |
| 2. | 2017–18ನೇ ಸಾಲಿನ ಅಂದಾಜು ಜಮೆ | ರೂ. | 91,40,000.00 |
| 3. | 2017–18ನೇ ಸಾಲಿನ ಠೇವಣಿ ಮೊಬಲಗು | ರೂ. | 1,56,87,597.00 |
| **4** | **2017–18ನೇ ಸಾಲಿನ ಅಂದಾಜು ಒಟ್ಟು ಜಮೆ** | **ರೂ.** | **4,42,07,067.00** |
| 5 | 2017–18ನೇ ಸಾಲಿನ ಅಂದಾಜು ಖರ್ಚು | ರೂ. | 1,63,55,000.00 |
| **6** | **2017–18ನೇ ಸಾಲಿನ ಅಂದಾಜು ಅಖೈರು ಶಿಲ್ಕು (ಅಂದಾಜು ಉಳಿತಾಯ ಮೊಬಲಗು)** | **ರೂ.** | **2,78,52,067.00** |

ಈ ಮೇಲಿನ ಅಂದಾಜು ಆಯವ್ಯಯ (ಬಡ್ಜೆಟ್ ಮಂಡನೆ) ಯನ್ನು ಸಭಾ ಅಂಗೀಕಾರಕ್ಕಾಗಿ ಸಲ್ಲಿಸಿದೆ.

**ನಿರ್ಣಯ:–** ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀ ಎ.ಸಿ.ದೇವಯ್ಯರವರು ಸಭೆಯಲ್ಲಿ ಮಂಡಿಸಿರುವ 2017–18ನೇ ಸಾಲಿನ ಪ್ರಾಧಿಕಾರದ ಅಂದಾಜು ಆಯವ್ಯಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಸದರಿ ಆಯವ್ಯಯಕ್ಕೆ ಸಭೆಯು ಸರ್ವಾನುಮತದ ಆಡಳಿತಾತ್ಮಕ ಅಂಗೀಕಾರ ನೀಡಿ ಸಕ್ಷಮ ಪ್ರಾಧಿಕಾರದಿಂದ ಅಂದರೆ ಕಾರ್ಯದರ್ಶಿಯವರು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಂದ ಮಂಜೂರಾತಿಯನ್ನು ಪಡೆದುಕೊಳ್ಳುವಂತೆ ತೀರ್ಮಾನಿಸಲಾಯಿತು.

## 4) ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು:-

1. ಕೆರೆ ಅಭಿವೃದ್ಧಿ ಪಡಿಸುವುದು/ತೆರೆದ ಬಾವಿಗಳನ್ನು ನಿರ್ಮಿಸುವ ಬಗ್ಗೆ.

ಪ್ರಾಧಿಕಾರದ ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಮಡಿಕೇರಿ ನಗರದ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಚರ್ಚಿಸುತ್ತಾ, ಕೊಡಗಿನ ಜೀವನದಿ ಕಾವೇರಿ ಇಲ್ಲಿ ಹುಟ್ಟಿದರೂ ಬೇಸಿಗೆಯಲ್ಲಿ ಕುಡಿಯುವ ನೀರಿಗೂ ಸಹ ಅಭಾವ ಇರುವುದನ್ನು ನಾವು ದಿನನಿತ್ಯ ಅನುಭವಿಸುತ್ತಿರುವುದು ಕಂಡುಬರುತ್ತಿದೆ. ಆದ್ದರಿಂದ ಮಡಿಕೇರಿ ನಗರದ ನಾಗರೀಕರಿಗೆ ಕುಡಿಯುವ ನೀರಿನ ಅಭಾವವನ್ನು ನೀಗಿಸುವ ನಿಟ್ಟಿನಲ್ಲಿ ಮಡಿಕೇರಿ ನಗರದ ನಗರಸಭಾ ವ್ಯಾಪ್ತಿಯ ಬ್ಲಾಕ್ ನಂ.24 ರಲ್ಲಿರುವ ಬ್ರಿಟೀಷ್ ಅವಧಿಯಲ್ಲಿ ನಿರ್ಮಾಣಗೊಂಡಿರುವ ಹಾಗೂ ಈ ಹಿಂದೆ ಮಡಿಕೇರಿ ನಗರದ ಶೇ.50ರ ಭಾಗಕ್ಕೆ ಶುದ್ಧ ನೀರು ಸರಬರಾಜು ಆಗುತ್ತಿದ್ದ ಜಲಮೂಲವಾದ ಕನ್ನಂಡ ಬಾಣೆಯಲ್ಲಿರುವ ಕೆರೆಯನ್ನು ದುರಸ್ಥಿ/ಅಭಿವೃದ್ಧಿ ಪಡಿಸಲು ಹಾಗೂ ಅವಶ್ಯವಿರುವ ಇನ್ನಿತರ ಕಡೆ ತೆರೆದ ಬಾವಿಯನ್ನು ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ ಪ್ರಾಧಿಕಾರದ 2017-18ನೇ ಸಾಲಿನ ಆಯವ್ಯಯದಲ್ಲಿ ರೂ.50.00ಲಕ್ಷ ಹಣವನ್ನು ಕಾಯ್ದಿರಿಸಿಕೊಳ್ಳಲಾಗಿದೆ ಇದರಿಂದ ಕನ್ನಂಡ ಬಾಣೆ ಕೆರೆ ಮತ್ತು ಇನ್ನಿತರ ತೆರೆದ ಬಾವಿ ಅಥವಾ ಕೆರೆಗಳನ್ನು ಅಬಿವೃದ್ಧಿ ಪಡಿಸುವ ಬಗ್ಗೆ 2017-18ನೇ ಸಾಲಿನಲ್ಲಿ ಪ್ರಾಧಿಕಾರದ ವತಿಯಿಂದ ಸದರಿ ಯೋಜನೆಯನ್ನು ಹಮ್ಮಿಕೊಳ್ಳುವ ಬಗ್ಗೆ ನಗರಸಭೆಯಿಂದ ಕ್ರೀಯಾಯೋಜನೆಗೆ ಅಂದಾಜು ದರಪಟ್ಟಿಯನ್ನು ತಯಾರಿಸಿ ಸಲ್ಲಿಸಲು ಹಾಗೂ ತದನಂತರ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದುಕೊಂಡು ಟೆಂಡರ್ ಕರೆದು ಸೂಕ್ತ ಕ್ರಮ ವಹಿಸಲು ಪ್ರಾಧಿಕಾರದ ಅನುಮೋದನೆಯನ್ನು ಬಯಸಿದರು.

ಸದರಿ ಯೋಜನೆಗಳ ಬಗ್ಗೆ ಪ್ರಾಧಿಕಾರದ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸುತ್ತಾ ಇದಕ್ಕೆ ಮಾನ್ಯ ವಿಧಾನ ಸಭಾ ಸದಸ್ಯರುಗಳು ಹಾಗೂ ವಿಧಾನ ಪರಿಷತ್ ಸದಸ್ಯರುಗಳು ಪ್ರತಿಕ್ರಿಯೆಯನ್ನು ನೀಡುತ್ತಾ, ಮಡಿಕೇರಿ ನಗರದಲ್ಲಿ ಬೇಸಿಗೆ ಕಾಲದಲ್ಲಿ ನೀರಿನ ಅಭಾವ ತುಂಬಾ ಇರುವುದರಿಂದ ಈ ಹಿಂದೆ ಮಡಿಕೇರಿ ನಗರಕ್ಕೆ ಗರಿಷ್ಟ ನೀರು ಸರಬರಾಜು ಆಗುತ್ತಿದ್ದ ಕನ್ನಂಡ ಬಾಣೆಯ ಶುದ್ಧ ಜಲ ಮೂಲದ ಘಟಕವಾಗಿದ್ದ ಬ್ರಿಟೀಷ್ ಅವಧಿಯಲ್ಲಿ ನಿರ್ಮಿಸಿದ್ದ 80X80 ಅಡಿ ಅಳತೆಯ ಕೆರೆಯನ್ನು ಅಭಿವೃದ್ಧಿ ಪಡಿಸುವುದು ಹಾಗೂ ಅವಶ್ಯವಿರುವ ಅಲ್ಲಲ್ಲಿ ಜಲ ಮೂಲ ಇರುವ ಪ್ರದೇಶದಲ್ಲಿ ತೆರೆದ ಬಾವಿಯನ್ನು ನಿರ್ಮಿಸುವ ಯೋಜನೆಗಳು ಅತೀ ಮುಖ್ಯವಾಗಿದ್ದು, ಈಗಾಗಲೇ ಹಲವಾರು ಜಲಮೂಲಗಳು ಕಲುಷಿತಗೊಳ್ಳುತ್ತಿದ್ದು, ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಪ್ರಾಧಿಕಾರದ ವತಿಯಿಂದ ಮುಖ್ಯವಾಗಿ ಮಡಿಕೇರಿ ನಗರಸಭಾ ವ್ಯಾಪ್ತಿಯಲ್ಲಿ ಬರುವ ಶುದ್ಧ ಜಲಮೂಲ ಘಟಕಗಳಿಗೆ ಚೈನ್‌ಲಿಂಕ್ ಬೇಲಿಯನ್ನು ಅಳವಡಿಸಿ ಸಂರಕ್ಷಿಸುವುದು ಹಾಗೂ ಈ ಮೇಲಿನ ಕೆರೆಗಳನ್ನು ಅಭಿವೃದ್ಧಿ ಪಡಿಸಿ ತೆರೆದ ಬಾವಿಯನ್ನು ನಿರ್ಮಿಸಲು ತಮ್ಮ ಸಹಕಾರ ಇರುವುದಾಗಿ ಅಭಿಪ್ರಾಯಿಸಿದರು. ಇದನ್ನು ಒಪ್ಪಿ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

2. ಮಡಿಕೇರಿ ನಗರಸಭಾ ಕಚೇರಿಯ ಮುಂಭಾಗದ ದಿ॥ಮೇಜರ್ ಮಂಗೇರಿರ ಮುತ್ತಣ್ಣ ವೃತ್ತದಿಂದ ರಾಜಸೀಟ್ ಉದ್ಯಾನದವರೆಗೆ ಪ್ರಾಧಿಕಾರದ ವತಿಯಿಂದ ಅಲಂಕಾರಿಕ ವಿದ್ಯುತ್ ಕಂಬ ಹಾಕಿ ಲ್ಯಾಂಪ್‌ಗಳನ್ನು ಅಳವಡಿಸುವ ಬಗ್ಗೆ.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀ ಎ.ಸಿ.ದೇವಯ್ಯರವರು ವಿವರಣೆಯನ್ನು ನೀಡುತ್ತಾ, ಮಡಿಕೇರಿ ನಗರವು ಕರ್ನಾಟಕದ ಕಾಶ್ಮೀರವೆಂದೇ ಕರೆಯಲ್ಪಡುತ್ತಿರುವ ಕೊಡಗು ಜಿಲ್ಲೆಯನ್ನು ಒಂದು ಪ್ರವಾಸಿ ಕೇಂದ್ರವಾಗಿ ಸರ್ಕಾರವೇ ಘೋಷಿಸಿರುವುದಾಗಿದೆ. ಈ ನಿಟ್ಟಿನಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಪ್ರವಾಸಿಗರು ಮಡಿಕೇರಿ ನಗರಕ್ಕೆ ಆಗಮಿಸುತ್ತಿದ್ದು, ಮಡಿಕೇರಿ ನಗರದ ರಮಣೀಯ ಪ್ರಕೃತಿ ಸೌಂದರ್ಯದೊಂದಿಗೆ ರಾಜಸೀಟು ಉದ್ಯಾನವನವು ಇದ್ದು, ಇದನ್ನು ವೀಕ್ಷಿಸಲು ಬರುವ ಸಾವಿರಾರು ಪ್ರವಾಸಿಗರೊಂದಿಗೆ ಸ್ಥಳೀಯರು ಸೇರಿ ಜನ ಮತ್ತು ವಾಹನ ದಟ್ಟಣೆಯು ಅತ್ಯಧಿಕವಾಗಿದ್ದು, ಇವರುಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಅಹಿತಕರ ಘಟನೆಗಳು ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮ ವಹಿಸುವ ನಿಟ್ಟಿನಲ್ಲಿ

ಮಡಿಕೇರಿ ನಗರದ ಮುಖ್ಯ ಬೀದಿಯಾಗಿರುವ ರಾಜಸೀಟ್ ರಸ್ತೆಯನ್ನು ಅಲಂಕಾರಿಕ ವಿದ್ಯುತ್ ಕಂಬಗಳಿಂದ ಅಲಂಕರಿಸುವ ಯೋಜನೆಯನ್ನು ಹಮ್ಮಿಕೊಳ್ಳುವ ಉದ್ದೇಶವನ್ನಿಟ್ಟುಕೊಂಡು ಪ್ರಾಧಿಕಾರದ ವತಿಯಿಂದ 2017-18ನೇ ಸಾಲಿನ ಆಯವ್ಯಯದಲ್ಲಿ ದಿ॥ಮೇಜರ್ ಮಂಗೇರಿರ ಮುತ್ತಣ್ಣ ವೃತ್ತದಿಂದ ರಾಜಸೀಟ್ ಉದ್ಯಾನವನದವರೆಗೆ ಅಲಂಕಾರಿಕ ವಿದ್ಯುತ್ ಕಂಬಗಳನ್ನು ಅಳವಡಿಸಿ ಲ್ಯಾಂಪ್‌ಗಳನ್ನು ಹಾಕುವ ಯೋಜನೆಗೆ ರೂ. 20.00ಲಕ್ಷ ಹಣವನ್ನು ಕಾಯ್ದಿರಿಸಿಕೊಳ್ಳಲಾಗಿದೆ ಎಂದು ತಿಳಿಸುತ್ತಾ, ಸದರಿ ಯೋಜನೆಗೆ ಸಭೆಯ ಅನುಮೋದನೆಯನ್ನು ಕೋರಿದರು.

ಮಡಿಕೇರಿ ನಗರವನ್ನು ಅಭಿವೃದ್ಧಿ ಪಡಿಸುವುದು ಮತ್ತು ಪ್ರವಾಸಿಗರೊಂದಿಗೆ ಸ್ಥಳೀಯ ನಾಗರೀಕರ ಹಿತದೃಷ್ಟಿಯನ್ನು ಪರಿಗಣಿಸಿ ಹಾಗೂ ಆಗುವ ಅನಾಹುತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಪೂರ್ವಭಾವಿಯಾಗಿ ಸದರಿ ಯೋಜನೆಯನ್ನು ಕೈಗೆತ್ತಿಕೊಳ್ಳುವುದು ಸಹ ಅತೀ ಮುಖ್ಯವೆಂದು ಪರಿಗಣಿಸಿ ಈ ಯೋಜನೆಗೂ ಸಹ ನಗರಸಭೆಯಿಂದ ಅಂದಾಜು ದರಪಟ್ಟಿಯನ್ನು ಪಡೆದು ಸರ್ಕಾರದ ಆಡಳಿತಾತ್ಮಕ ಅನುಮೋದನೆಯೊಂದಿಗೆ ಕ್ರಮ ವಹಿಸುವಂತೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

3. ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿರವರು ದಿನಾಂಕ:13.01.2017ರಂದು ಪತ್ರ ಸಲ್ಲಿಸಿ, ಡಿ॥ ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಹಾಗೂ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಕಟ್ಟಡ ನಿರ್ಮಿಸಲು ಜಾಗ ಮಂಜೂರಾತಿ ಮಾಡಿಕೊಡಲು ಕೋರಿರುವ ಬಗ್ಗೆ.

ಈ ಮೇಲಿನ ವಿಷಯವನ್ನು ಸಭೆಯಲ್ಲಿ ಆಯುಕ್ತರು ಪ್ರಸ್ತಾಪಿಸಿ ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕೆ.ಬಾಡಗ ಗ್ರಾಮದ ಸರ್ವೆ ನಂ.74/1, 74/5, 75/1 ಮತ್ತು 75/6 ರಲ್ಲಿನ ಒಟ್ಟು 10.10ಎಕರೆ ವಿಸ್ತೀರ್ಣದ ಜಮೀನು ಶ್ರೀ ಬಿ.ಜಿ.ಚಂಗಪ್ಪನವರ ಹೆಸರಿನಲ್ಲಿ ಈ ಕಚೇರಿಯಿಂದ ಅನುಮೋದನೆಯಾಗಿರುವ ವಿನ್ಯಾಸ ನಕ್ಷೆಯಲ್ಲಿ ಸಿ.ಎ.ನಿವೇಶನ ಮತ್ತು ಕೊಳಚೆ ನಿರ್ಮೂಲನಾ ಘಟಕಕ್ಕೆಂದು ಕಾಯ್ದಿರಿಸಿರುವ ಒಟ್ಟು 2473.56 ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ ಶ್ರೀ ಡಿ॥ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕಿಯರ ಮತ್ತು ಬಾಲಕರ ವಿದ್ಯಾರ್ಥಿ ನಿಲಯಗಳಿಗೆ ಕಟ್ಟಡ ನಿರ್ಮಿಸಲು ಜಾಗ ಮಂಜೂರು ಮಾಡಲು ಮಾನ್ಯ ಜಿಲ್ಲಾಧಿಕಾರಿಯವರು ಮೌಖಿಕವಾಗಿ ಆದೇಶ ನೀಡಿದ್ದು, ಸದರಿ ಜಾಗವನ್ನು ಮಂಜೂರು ಮಾಡಲು ಉಪ ನೋಂದಣಾಧಿಕಾರಿಯವರು ನಿಗಧಿ ಪಡಿಸಿರುವ ಮಾರ್ಕೆಟ್ ದರದ ಶೇ. 50ರ ಭಾಗವನ್ನು ಪ್ರಾಧಿಕಾರಕ್ಕೆ ಪಾವತಿಸಿಕೊಂಡು ಮಂಜೂರು ಮಾಡಿಕೊಡಲು ಸೂಚಿಸಿರುತ್ತಾರೆ.

ಸದರಿ ಬಡಾವಣೆಯ ಸಿ.ಎ.ನಿವೇಶನವನ್ನು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ದಾನ ಪತ್ರದ ಮೂಲಕ ಭೂ ಮಾಲೀಕರು ನೋಂದಾಯಿಸಿ ಕೊಟ್ಟಿರುತ್ತಾರೆ. ಇದಕ್ಕೆ ನಗರಸಬೆಯಲ್ಲಿ ಖಾತೆ ವರ್ಗಾವಣೆ ಮಾಡಿಕೊಂಡು ನಂತರದಲ್ಲಿ ನೀಡಲು ಕ್ರಮ ವಹಿಸಬಹುದೆಂದು ಆಯುಕ್ತರು ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ಶ್ರೀ ಡಿ॥ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕಿಯರ ಮತ್ತು ಬಾಲಕರ ವಿದ್ಯಾರ್ಥಿ ನಿಲಯಗಳನ್ನು ಮಾತ್ರ ನಿರ್ಮಿಸಲು ಅನುಮತಿ ನೀಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನಿಡಿತು.

4. ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಜಮೀನುಗಳನ್ನು ಭೂ ಪರಿವರ್ತಿಸುವ ಮೊದಲು ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯುವ ಬಗ್ಗೆ.

ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರ ನೀಡುವುದನ್ನು 5 ಸೆಂಟ್‌ಗೆ ಮಿತಿಗೊಳಿಸಿ ಪ್ರಾಧಿಕಾರದ ಆಯುಕ್ತರಿಗೂ ಹಾಗೂ 10 ಸೆಂಟ್‌ಗೆ ಮಿತಿಗೊಳಿಸಿ ಪ್ರಾಧಿಕಾರದ ಅಧ್ಯಕ್ಷರ ಅನುಮೋದನೆಯೊಂದಿಗೆ ನಿರಾಕ್ಷೇಪಣಾ ಪತ್ರ ನೀಡಬಹುದೆಂದು

ಉಳಿದಂತೆ ಪ್ರಾಧಿಕಾರದ ಸಭಾ ಗಮನಕ್ಕೆ ತಂದು ನಿರಾಕ್ಷೇಪಣಾ ಪತ್ರ ನೀಡುವುದೆಂದು ಈ ಹಿಂದೆ ನಡೆದ ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನವಾಗಿರುವ ಬಗ್ಗೆ ಅಧ್ಯಕ್ಷರು ಪ್ರಸ್ತಾಪಿಸುತ್ತಾ ಸಾರ್ವಜನಿಕರಿಗೆ ಅನುಕೂಲತೆ ಮಾಡುವ ಹಿತದೃಷ್ಟಿಯಿಂದ ಅಧ್ಯಕ್ಷರಿಗೆ ಇರುವ ಅಧಿಕಾರವನ್ನು ಹೆಚ್ಚಿಸಬೇಕೆಂದು ಪ್ರಾಧಿಕಾರದ ಅಭಿಪ್ರಾಯವನ್ನು ಬಯಸಿದರು. ಅಧ್ಯಕ್ಷರ ಅಭಿಪ್ರಾಯವನ್ನು ಸಭೆಯು ಒಪ್ಪಿ ಗರಿಷ್ಟ 20 ಸೆಂಟ್‌ವರೆಗೆ ಅಧ್ಯಕ್ಷರ ಅನುಮೋದನೆಯನ್ನು ಪಡೆದುಕೊಂಡು ನಿರಾಕ್ಷೇಪಣಾ ಪತ್ರ ನೀಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

ಸಹಿ/–
(ಶ್ರೀ ಎ.ಸಿ.ದೇವಯ್ಯ(ಚುಮ್ಮಿ),
ಅಧ್ಯಕ್ಷರು,
ನಗರಾಭಿವೃದ್ಧಿ ಪ್ರಾಧಿಕಾರ,
ಮಡಿಕೇರಿ.

ಸಹಿ/–
(ಶ್ರೀ ಬಿ.ಪಿ.ರಾಜಶೇಖರ್)
ಆಯುಕ್ತರು(ಪ್ರ),
ನಗರಾಭಿವೃದ್ಧಿ ಪ್ರಾಧಿಕಾರ,
ಮಡಿಕೇರಿ.